# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2014-15ನೇ ಸಾಲಿನ ಶಾಸನಬದ್ಧ ಅನುದಾನದ ನಾಲ್ಕನೇ ತ್ರೈಮಾಸಿಕ ಕಂತನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಸಮಸಂಖ್ಯೆಯ ಆದೇಶ ದಿನಾಂಕ: 09-09-2014.
2. ಸರ್ಕಾರದ ಸಮಸಂಖ್ಯೆಯ ಆದೇಶ ದಿನಾಂಕ: 07-11-2014.
3. ಸರ್ಕಾರದ ಸಮಸಂಖ್ಯೆಯ ಆದೇಶ ದಿನಾಂಕ: 30-12-2014.
4. ಸರ್ಕಾರದ ಸಮಸಂಖ್ಯೆಯ ಆದೇಶ ದಿನಾಂಕ:16-03-2015, 20-03-2015 ಮತ್ತು 30-03-2015.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಗ್ರಾಪಸ 2015 ದಿನಾಂಕ: 10/16-03-2015.

**ಪ್ರಸ್ತಾವನೆ:**

ಮೇಲೆ ಓದಲಾದ (1), (2), (3) ಮತ್ತು (4) ರ ಸರ್ಕಾರದ ಆದೇಶಗಳಲ್ಲಿ 5629 ಗ್ರಾಮ ಪಂಚಾಯಿತಿಗಳಿಗೆ 2014-15 ನೇ ಸಾಲಿನ ಶಾಸನಬದ್ಧ ಅನುದಾನ ರೂ. 616.63 ಕೋಟಿಗಳನ್ನು ಲೆಕ್ಕ ಶೀರ್ಷಿಕೆ 2515-00-198-01-07(ಯೋಜನೆ)ಯಡಿಯಲ್ಲಿ ಬಿಡುಗಡೆಮಾಡಲಾಗಿದೆ. ರೂ. 153.91 ಕೋಟಿಗಳನ್ನು 4ನೇ ಕಂತಿನ ಶಾಸನಬದ್ಧ ಅನುದಾನವಾಗಿ ಬಿಡುಗಡೆಮಾಡಲಾಗಿದ್ದು, ಮೇಲೆ ಓದಲಾದ ಸರ್ಕಾರದ ಆದೇಶ (5) ರಲ್ಲಿ ನೀಡಿರುವ ಮಾರ್ಗಸೂಚಿಗಳಂತೆ, ಈ ಪೈಕಿ ಶೇ. 60 ರಷ್ಟು ಮೊಬಲಗನ್ನು ವಿದ್ಯುತ್ ವೆಚ್ಚ ಪಾವತಿಸಲು ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಯಿಂದ ಗ್ರಾಮ ಪಂಚಾಯತಿಗಳ ಹೆಸರಿನಲ್ಲಿ ಸ್ಥಳೀಯ ಎಸ್.ಬಿ.ಎಂ. ಖಾತೆಗಳಲ್ಲಿ/ಅದರ ಸಹ ಬ್ಯಾಂಕ್‌ಗಳಲ್ಲಿ ತೆರೆಯುವ ESCROW ಖಾತೆಗಳಿಗೆ ಜಮಾ ಮಾಡಲು ತಿಳಿಸಲಾಗಿದೆ. ಹಾಗೆಯೇ ಶೇ. 40 ರಷ್ಟು ಮೊಬಲಗನ್ನು ಸಿಬ್ಬಂದಿ ವೇತನ ಪಾವತಿಸಲು ನಿಗಧಿಪಡಿಸಿದೆ. 2014-15ನೇ ಸಾಲಿನಲ್ಲಿ ಜಿಲ್ಲಾವಾರು 4ನೇ ಕಂತಿನಲ್ಲಿ ಬಿಡುಗಡೆಮಾಡಿರುವ ಶಾಸನಬದ್ಧ ಅನುದಾನ, ESCROW ಖಾತೆಗಳಿಗೆ ಜಮಾ ಮಾಡಬೇಕಾದ ಶೇ. 60 ರ ಮೊಬಲಗು, ಸಿಬ್ಬಂದಿ ವೇತನಕ್ಕಾಗಿ ನಿಗಧಿಪಡಿಸಿದ ಶೇ. 40 ರ ಮೊಬಲಗು ಹಾಗೂ ಬಿಡುಗಡೆಮಾಡಿದ ಒಟ್ಟು ಅನುದಾನದ ವಿವರಗಳನ್ನು ಅನುಬಂಧ-1 ರಲ್ಲಿ ನಮೂದಿಸಲಾಗಿದೆ. ಗ್ರಾಮ ಪಂಚಾಯತಿವಾರು ಅನುದಾನದ ಹಂಚಿಕೆವಾರು, ವಿದ್ಯುತ್ ಬಿಲ್ ಬಾಕಿ ಪಾವತಿಸಲು ESCROW ಖಾತೆಗಳಿಗೆ ಜಮಾ ಮಾಡಬೇಕಾದ ಶೇ. 60 ರಷ್ಟು ಮೊಬಲಗು ಮತ್ತು ಸಿಬ್ಬಂದಿ ವೇತನಕ್ಕಾಗಿ ನಿಗಧಿಪಡಿಸಿರುವ ಶೇ. 40 ರ ವಿವರವನ್ನು ಒಳಗೊಂಡಂತ ಮಾಹಿತಿಯನ್ನು ಅನುಬಂಧ-2 ರಲ್ಲಿ ನಮೂದಿಸಲಾಗಿದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ: 287: ಗ್ರಾಪಂಅ: 2014
## ದಿನಾಂಕ:24-06-2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2014-15 ನೇ ಸಾಲಿನ ಶಾಸನಬದ್ಧ ಅನುದಾನದ 4ನೇ ತ್ರೈಮಾಸಿಕ ಕಂತಿನ ಮೊತ್ತ ರೂ. 153.91 ಕೋಟಿಗಳನ್ನು (ಒಂದು ನೂರ ಐವತ್ತ ಮೂರು ಕೋಟಿ ತೊಂಭತ್ತೊಂದು ಲಕ್ಷ ರೂ.ಗಳನ್ನು ಮಾತ್ರ) ಲೆಕ್ಕ ಶೀರ್ಷಿಕೆ: 2515-00-198-01-07 (ಯೋಜನೆ) ಅಡಿಯಲ್ಲಿ 5629 ಗ್ರಾಮ ಪಂಚಾಯಿತಿಗಳಿಗೆ ಅನುಬಂಧ-2 ರಲ್ಲಿರುವಂತೆ ಬಿಡುಗಡೆ ಮಾಡಿ ಆದೇಶಿಸಿದೆ.

1. ಗ್ರಾಮ ಪಂಚಾಯಿತಿಗಳಿಗೆ 2014-15 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತದಲ್ಲಿ (ಅನುಬಂಧ-2 ರ ಕಲಂ-8) ಶೇ. 60 ರಷ್ಟನ್ನು (ಅನುಬಂಧ-2 ರ ಕಲಂ-9) ಸಿಂಡಿಕೇಟ್ ಬ್ಯಾಂಕಿನಿಂದ ನೇರವಾಗಿ ಆನ್‌ಲೈನ್ ಮುಖಾಂತರ ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಖಾತೆಗೆ ವರ್ಗಾಯಿಸಲು ತಿಳಿಸಿದೆ. ಪ್ರಧಾನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆಯಿಂದ ಗ್ರಾಮ ಪಂಚಾಯಿತಿಗಳ ಹೆಸರಿನಲ್ಲಿ ಸ್ಥಳೀಯ ಎಸ್.ಬಿ.ಎಂ ಖಾತೆಗಳಲ್ಲಿ/ಅದರ ಸಹ ಬ್ಯಾಂಕ್‌ಗಳಲ್ಲಿ ತೆರೆಯುವ ESCROW ಖಾತೆಗಳಿಗೆ ಜಮಾ ಮಾಡುವ ಸಲುವಾಗಿ ಗ್ರಾಮ ಪಂಚಾಯಿತಿಗಳು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಸಹಕಾರದೊಂದಿಗೆ ಪ್ರತ್ಯೇಕವಾಗಿ ತೆರೆದ ESCROW ಖಾತೆಗಳಿಗೆ ಜಮಾ ಮಾಡಿಸಲು ಕ್ರಮ ವಹಿಸಲು ತಿಳಿಸಲಾಗಿದೆ. ಈ ಮೊತ್ತವನ್ನು ತಪ್ಪದೇ ಗ್ರಾಮ ಪಂಚಾಯಿತಿಗಳಲ್ಲಿ ಬಾಕಿ ಇರುವ ವಿದ್ಯುತ್ ಬಿಲ್ಲನ್ನು ಪಾವತಿಸಲು ಕ್ರಮ ವಹಿಸುವುದು.

2. ಗ್ರಾಮ ಪಂಚಾಯಿತಿಗಳಿಗೆ 2014-15 ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತದಲ್ಲಿ (ಅನುಬಂಧ-2 ರ ಕಲಂ-8) ಶೇ. 40 ರಷ್ಟು (ಅನುಬಂಧ-2 ರ ಕಲಂ-10) ಅನುದಾನವನ್ನು ಸಿಬ್ಬಂದಿ ವೇತನಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಿಂದ ನೇರವಾಗಿ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಬ್ಯಾಂಕ್ ಖಾತೆಯ ನಂಬರ್‌ಗಳಿಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಆದೇಶಿಸಿದೆ.

3. ಆದೇಶದೊಂದಿಗೆ ಅಡಕಗೊಳಿಸಿರುವ ಅನುಬಂಧ-1 ರಲ್ಲಿ ಜಿಲ್ಲಾವಾರು 2014-15ನೇ ಸಾಲಿನ ಶಾಸನಬದ್ಧ ಅನುದಾನದ ಹಂಚಿಕೆ ವಿವರಗಳನ್ನು ನಮೂದಿಸಿದ್ದು, ಅನುಬಂಧ-2 ರಲ್ಲಿ ತಾಲ್ಲೂಕುವಾರು/ಗ್ರಾಮ ಪಂಚಾಯಿತಿವಾರು ಹಂಚಿಕೆ ಮಾಡಿರುವ ನಾಲ್ಕನೇ ತ್ರೈಮಾಸಿಕ ಕಂತಿನ ಶಾಸನಬದ್ಧ ಅನುದಾನವನ್ನು ಮೇಲ್ಕಂಡ ಉದ್ದೇಶ ಗಳಿಗಲ್ಲದೆ ಜಿಲ್ಲಾ/ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ ಹಾಗೂ ಜಿಲ್ಲಾ ಪಂಚಾಯಿತಿಗಳು ವಿದ್ಯುತ್‌ಬಿಲ್ ಪಾವತಿಸಲು ಉಪಯೋಗಿಸಿರುವ ಅನುದಾನ ವಿವರವನ್ನು ಸರ್ಕಾರಕ್ಕೆ ದಿನಾಂಕ: 31-07-2015 ರೊಳಗೆ ಕಳುಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ. ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ರವರಿಗೆ:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ 30 ಜಿಲ್ಲಾ ಪಂಚಾಯಿತಿಗಳು.
3. 176 ತಾಲ್ಲೂಕುಗಳ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ, ತಾಲ್ಲೂಕಿನಲ್ಲಿರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆದೇಶದ ಪ್ರತಿಯೊಂದಿಗೆ ಅನುಬಂಧ-2ನ್ನು ಕಳುಹಿಸಲು ಸೂಚಿಸುತ್ತಾ, 4ನೇ ಕಂತಿನ ಶಾಸನಬದ್ಧ ಅನುದಾನದ ಬಿಡುಗಡೆಯು ತೆರಿಗೆ ವಸೂಲಾತಿಯನ್ನು ಅವಲಂಬಿಸಿರುವುದರಿಂದ ಕಡ್ಡಾಯವಾಗಿ ತೆರಿಗೆ ವಸೂಲಾತಿಯನ್ನು ಸರ್ಕಾರದ ನಿರ್ದೇಶನದಂತೆ ಮಾಡಲು ಸೂಚನೆಗಳನ್ನು ನೀಡಲು ತಿಳಿಸಿದೆ.
4. ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅವಿನ್ಯೂ ರಸ್ತೆ, ಕಾವೇರಿ ಭವನ ಮುಂಭಾಗ (ಬೆಂಗಳೂರು)
5. ಪ್ರಧಾನ ವ್ಯವಸ್ಥಾಪಕರು, ಸ್ಟೇಟ್ ಬ್ಯಾಂಕ್ ಮೈಸೂರು, ಜಿ. ಸೇವಾ ವಿಭಾಗ, ಬೌರಿಂಗ್ ಆಸ್ಪತ್ರೆ ಮುಂಭಾಗ, ಎಲ್.ಸಿ. ರಸ್ತೆ, ಶಿವಾಜಿನಗರ, ಬೆಂಗಳೂರು.
6. ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
7. ಮಾಹಿತಿ ಕೇಂದ್ರ ವೆಬ್‌ಸೈಟ್, ಗ್ರಾ.ಅ.ಪ ಇಲಾಖೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
2. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6 ಆರ್ಥಿಕ ಇಲಾಖೆ, ವಿಧಾನಸೌಧ.
3. ಅಂತರೀಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 287 ಗ್ರಾಪಂಅ 2014, ದಿನಾಂಕ: 24-06-2015ರ ಅನುಬಂಧ - 1

2014-15ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಮಾಡಿರುವ 1,2,3 ಹಾಗೂ 4ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಮಾಡಬೇಕಾಗಿರುವ ಶಾಸನಬದ್ಧ ಅನುದಾನದ ವಿವರ (ರೂ. ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಉಪ ಲೆಕ್ಕ ಶೀರ್ಷಿಕೆ | ಜಿಲ್ಲಾ ಪಂಚಾಯಿತಿ ಹೆಸರು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | 2014-15ನೇ ಸಾಲಿಗೆ ಆಯವ್ಯಯದಲ್ಲಿ ನಿಗಧಿಪಡಿಸಿದ ಶಾಸನಬದ್ಧ ಅನುದಾನ | 2014-15 ನೇ ಸಾಲಿಗೆ ಜನಸಂಖ್ಯೆ ಆಧಾರಿತ ಬಿಡುಗಡೆ ಮಾಡಲು ಉದ್ದೇಶಿಸಿದ ಶಾಸನಬದ್ಧ ಅನುದಾನ | 1, 2 ಮತ್ತು 3ನೇ ತ್ರೈಮಾಸಿಕ ಕಂತಿಗಳಲ್ಲಿ ಜನಸಂಖ್ಯೆ ಆಧಾರಿತ ಬಿಡುಗಡೆಮಾಡಲಾದ ಒಟ್ಟು ಶಾಸನಬದ್ಧ ಅನುದಾನ | 4ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆಮಾಡಲು ಉದ್ದೇಶಿಸಿದ ಅನುದಾನ ಮೊತ್ತ | ದಿನಾಂಕ 16/20-3-2015 ರಂದು ಬಿಡುಗಡೆ ಮಾಡಿರುವ ಮೊತ್ತ (2014-15 ನೇ ಸಾಲಿನ ಆಯವ್ಯಯದ ಬಾಕಿ ಮೊತ್ತ) | ಆರ್ಥಿಕ ಇಲಾಖೆಯಿಂದ ಜನಸಂಖ್ಯೆ ಆಧಾರ ಮೇಲೆ ಹೆಚ್ಚುವರಿಯಾಗಿ ಬಿಡುಗಡೆ ಮಾಡುತ್ತಿರುವ ಮೊತ್ತ | 4ನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತ | Escrow ಖಾತೆಗೆ ಜಮ ಮಾಡಬೇಕಾದ ಶೇ.60 ರ ವಿದ್ಯುತ್ ಬಿಲ್ ಮೊತ್ತ | ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ನಿಗದಿಪಡಿಸಿದ ಶೇ.40 ರ ಮೊತ್ತ |
|---|---|---|---|---|---|---|---|---|---|---|---|---|
| 01 | 461 | ಬಾಗಲಕೋಟೆ | 161 | 1746 | 1888 | 1416.00 | 472.00 | 330.00 | 142.00 | 472.00 | 283.20 | 188.80 |
| 02 | 402 | ಬೆಂಗಳೂರು (ಗ್ರಾ) | 98 | 1048 | 1087 | 828.00 | 259.00 | 220.00 | 39.00 | 259.00 | 155.40 | 103.60 |
| 03 | 401 | ಬೆಂಗಳೂರು (ನಗರ) | 86 | 1000 | 1273 | 954.00 | 319.00 | 46.00 | 273.00 | 319.00 | 191.40 | 127.60 |
| 04 | 413 | ಬೆಳಗಾಂ | 486 | 5178 | 5722 | 4293.00 | 1429.00 | 885.00 | 544.00 | 1429.00 | 857.40 | 571.60 |
| 05 | 418 | ಬಳ್ಳಾರಿ | 189 | 2058 | 2218 | 1665.00 | 553.00 | 393.00 | 160.00 | 553.00 | 331.80 | 221.20 |
| 06 | 419 | ಬೀದರ್ | 175 | 1852 | 1917 | 1437.00 | 480.00 | 415.00 | 65.00 | 480.00 | 288.00 | 192.00 |
| 07 | 414 | ಬಿಜಾಪುರ | 199 | 2190 | 2364 | 1773.00 | 591.00 | 417.00 | 174.00 | 591.00 | 354.60 | 236.40 |
| 08 | 455 | ಚಾಮರಾಜನಗರ | 120 | 1254 | 1282 | 963.00 | 319.00 | 291.00 | 28.00 | 319.00 | 191.40 | 127.60 |
| 09 | 453 | ಚಿಕ್ಕಬಳ್ಳಾಪುರ | 151 | 1540 | 1556 | 1167.00 | 389.00 | 373.00 | 16.00 | 389.00 | 233.40 | 155.60 |
| 10 | 408 | ಚಿಕ್ಕಮಗಳೂರು | 226 | 2272 | 2283 | 1713.00 | 570.00 | 559.00 | 11.00 | 570.00 | 342.00 | 228.00 |
| 11 | 403 | ಚಿತ್ರದುರ್ಗ | 185 | 1960 | 1996 | 1497.00 | 499.00 | 463.00 | 36.00 | 499.00 | 299.40 | 199.60 |
| 12 | 409 | ದಕ್ಷಿಣ ಕನ್ನಡ | 203 | 2114 | 2205 | 1653.00 | 552.00 | 461.00 | 91.00 | 552.00 | 331.20 | 220.80 |
| 13 | 451 | ದಾವಣಗೆರೆ | 230 | 2356 | 2392 | 1794.00 | 598.00 | 562.00 | 36.00 | 598.00 | 358.80 | 239.20 |
| 14 | 415 | ಧಾರವಾಡ | 127 | 1316 | 1350 | 1014.00 | 336.00 | 302.00 | 34.00 | 336.00 | 201.60 | 134.40 |
| 15 | 462 | ಗದಗ | 106 | 1106 | 1125 | 843.00 | 282.00 | 263.00 | 19.00 | 282.00 | 169.20 | 112.80 |
| 16 | 417 | ಕಲಬುರಗಿ | 220 | 2390 | 2478 | 1860.00 | 618.00 | 530.00 | 88.00 | 618.00 | 370.80 | 247.20 |
| 17 | 410 | ಹಾಸನ | 258 | 2616 | 2629 | 1971.00 | 658.00 | 645.00 | 13.00 | 658.00 | 394.80 | 263.20 |
| 18 | 463 | ಹಾವೇರಿ | 208 | 2128 | 2165 | 1623.00 | 542.00 | 505.00 | 37.00 | 542.00 | 325.20 | 216.80 |
| 19 | 411 | ಕೊಡಗು | 98 | 1000 | 1002 | 753.00 | 249.00 | 247.00 | 2.00 | 249.00 | 149.40 | 99.60 |
| 20 | 404 | ಕೋಲಾರ | 156 | 1606 | 1617 | 1212.00 | 405.00 | 394.00 | 11.00 | 405.00 | 243.00 | 162.00 |
| 21 | 466 | ಕೊಪ್ಪಳ | 134 | 1482 | 1619 | 1215.00 | 404.00 | 267.00 | 137.00 | 404.00 | 242.40 | 161.60 |
| 22 | 412 | ಮಂಡ್ಯ | 232 | 2398 | 2423 | 1818.00 | 605.00 | 580.00 | 25.00 | 605.00 | 363.00 | 242.00 |
| 23 | 407 | ಮೈಸೂರು | 235 | 2526 | 2642 | 1983.00 | 659.00 | 543.00 | 116.00 | 659.00 | 395.40 | 263.60 |
| 24 | 420 | ರಾಯಚೂರು | 165 | 1838 | 2015 | 1512.00 | 503.00 | 326.00 | 177.00 | 503.00 | 301.80 | 201.20 |
| 25 | 452 | ರಾಮನಗರ | 130 | 1334 | 1350 | 1014.00 | 336.00 | 320.00 | 16.00 | 336.00 | 201.60 | 134.40 |
| 26 | 405 | ಶಿವಮೊಗ್ಗ | 260 | 2616 | 2618 | 1965.00 | 653.00 | 651.00 | 2.00 | 653.00 | 391.80 | 261.20 |
| 27 | 406 | ತುಮಕೂರು | 321 | 3296 | 3327 | 2496.00 | 831.00 | 800.00 | 31.00 | 831.00 | 498.60 | 332.40 |
| 28 | 457 | ಉಡುಪಿ | 146 | 1524 | 1593 | 1194.00 | 399.00 | 330.00 | 69.00 | 399.00 | 239.40 | 159.60 |
| 29 | 416 | ಉತ್ತರ ಕನ್ನಡ | 207 | 2110 | 2175 | 1632.00 | 543.00 | 478.00 | 65.00 | 543.00 | 325.80 | 217.20 |
| 30 | 421 | ಯಾದಗಿರಿ | 117 | 1276 | 1352 | 1014.00 | 338.00 | 262.00 | 76.00 | 338.00 | 202.80 | 135.20 |
| | | ಒಟ್ಟು | 5629 | 59130 | 61663 | 46272.00 | 15391.00 | 12858.00 | 2533.00 | 15391.00 | 9234.60 | 6156.40 |

(ಪಿ. ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.